This Booklet contains **20** printed pages.
इस पुस्तिका में **20** मुद्रित पृष्ठ हैं।

# AK14I

**Test Booklet No.**
परीक्षा पुस्तिका संख्या

## PAPER—I / प्रश्न-पत्र—I

## KANNADA LANGUAGE-SUPPLEMENT / कन्नड़ भाषा परिशिष्ट

**PART—IV & V / भाग—IV & V**

**Test Booklet Code**
**परीक्षा पुस्तिका संकेत**

**K**

Do not open this Test Booklet until you are asked to do so.
इस परीक्षा पुस्तिका को तब तक न खोलें जब तक कहा न जाए।
Read carefully the Instructions on the Back Cover (Pages 19 & 20) of this Test Booklet.
इस परीक्षा पुस्तिका के पिछले आवरण (पृष्ठ 19 व 20) पर दिए गए निर्देशों को ध्यान से पढ़ें।
**For Instructions in Kannada see Page 2 of this Booklet.**
**कन्नड़ में निर्देशों के लिए इस पुस्तिका का पृष्ठ 2 देखें।**

### *Instructions for Candidates:*

1. This booklet is a supplement to the Main Test Booklet for those candidates who wish to answer **EITHER** Part—IV (Language—I) **OR** Part—V (Language—II) in **KANNADA** language, but **NOT BOTH**.
2. Candidates are required to answer Parts—I, II, III from the Main Test Booklet and Parts—IV and V from the languages chosen by them.
3. Questions on English and Hindi languages for Part—IV and Part—V have been given in the Main Test Booklet. Language Supplements can be asked for separately.
4. Use **Blue/Black Ballpoint Pen only** for writing particulars on this page/marking responses in the Answer Sheet.
5. The CODE for this Language Booklet is **K**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **Two** Parts—IV and V, consisting of **60** Objective-type Questions and each carrying 1 mark :
   Part-IV : Language-I (Kannada) (Q. Nos. 91-120)
   Part-V : Language-II (Kannada) (Q. Nos. 121-150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada Language have been given. **In case the language(s) you have opted for as Language-I and/or Language-II is a language other than Kannada, please ask for a Test Booklet that contains questions on that Language. The languages being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

### *परीक्षार्थियों के लिए निर्देश :*

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो या तो भाग—IV (भाषा—I) या भाग—V (भाषा—II) कन्नड़ भाषा में देना चाहते हैं, लेकिन दोनों नहीं।
2. परीक्षार्थी भाग—I, II, III के उत्तर मुख्य परीक्षा पुस्तिका से दें और भाग—IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग—IV व भाग—V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर-पत्र पर निशान लगाने के लिए केवल **नीले/काले बॉलपॉइंट पेन** का प्रयोग करें।
5. इस भाषा पुस्तिका का संकेत **K** है। यह सुनिश्चित कर लें कि इस भाषा परिशिष्ट पुस्तिका का संकेत, उत्तर-पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में दो भाग—IV और V हैं, जिनमें **60** वस्तुनिष्ठ प्रश्न हैं तथा प्रत्येक 1 अंक का है :
   भाग–IV : भाषा–I (कन्नड़) (प्रश्न सं० 91-120)
   भाग–V : भाषा–II (कन्नड़) (प्रश्न सं० 121-150)
7. भाग–IV में भाषा–I के लिए 30 प्रश्न और भाग–V में भाषा–II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से सम्बन्धित प्रश्न दिए गए हैं। **यदि भाषा–I और/या भाषा–II में आपके द्वारा चुनी गई भाषा(एँ) कन्नड़ के अलावा है/हैं, तो कृपया उस भाषा वाली परीक्षा पुस्तिका माँग लें। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग–V (भाषा–II) के लिए, भाषा सूची से ऐसी भाषा चुनें जो उनके द्वारा भाषा–I (भाग–IV) में चुनी गई भाषा से भिन्न हो।**
9. रफ़ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर-पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

Name of the Candidate (in Capitals) : ____________________
परीक्षार्थी का नाम (बड़े अक्षरों में)

Roll Number (in figures) : ____________________
अनुक्रमांक (अंकों में)
(in words) : ____________________
(शब्दों में)

Centre of Examination (in Capitals) : ____________________
परीक्षा-केन्द्र (बड़े अक्षरों में)

Candidate's Signature : ____________________
परीक्षार्थी के हस्ताक्षर

Invigilator's Signature : ____________________
निरीक्षक के हस्ताक्षर

Facsimile signature stamp of Centre Superintendent ____________________

**07-I**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# AK14I

ಪ್ರಶ್ನೆ ಪುಸ್ತಿಕೆ ಸಂಕೇತ

**K**

## ಪ್ರಶ್ನೆ ಪತ್ರಿಕೆ—I

## ಕನ್ನಡ ಭಾಷಾ ಪೂರಕ

## ಭಾಗ—IV & V

ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.

ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 and 20) ಗಮನವಿಟ್ಟು ಓದಿರಿ.

*ಪರೀಕ್ಷಾರ್ಥಿಗಳಿಗೆ ಸೂಚನೆಗಳು :*

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ **IV** (ಭಾಷೆ I) ಅಥವಾ ಭಾಗ V (ಭಾಷೆ **II**)ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು, ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, IIIನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ **IV** ಮತ್ತು Vರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು Vರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **K** ಆಗಿದೆ. ಉತ್ತರ ಪತ್ರಿಕೆಯ ಪುಟ-2ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ **IV** ಮತ್ತು **V**. ಇದರಲ್ಲಿ 60 ವಸ್ತುನಿಷ್ಠ ಪ್ರಶ್ನೆಗಳಿವೆ. ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ :

| | | | |
|---|---|---|---|
| ಭಾಗ **IV** | : | ಭಾಷಾ **I** – (ಕನ್ನಡ) | (ಪ್ರಶ್ನೆ **91**ರಿಂದ **120**) |
| ಭಾಗ **V** | : | ಭಾಷಾ **II** – (ಕನ್ನಡ) | (ಪ್ರಶ್ನೆ **121**ರಿಂದ **150**) |

7. ಭಾಗ **IV**ರಲ್ಲಿ ಭಾಷೆ-Iಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ **V**ರಲ್ಲಿ ಭಾಷೆ **II**ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. ಒಂದು ವೇಳೆ ಭಾಷೆ **I** ಮತ್ತು/ಅಥವಾ **II**ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.
8. ಪರೀಕ್ಷಾರ್ಥಿ ಭಾಗ **V** (ಭಾಷೆ **II**)ಕ್ಕಾಗಿ, ಭಾಷೆ **I** (ಭಾಗ **IV**)ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ **(OMR)** ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ **(Whitener)** ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ (ಅಂಕೆಗಳಲ್ಲಿ) : ______________________

(ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ): ______________________

ಪರೀಕ್ಷಾರ್ಥಿಯ ಸಹಿ : ______________________ ನಿರೀಕ್ಷಕರ ಸಹಿ : ______________________

Facsimile signature stamp of Centre Superintendent ______________________

ಅಭ್ಯರ್ಥಿಗಳು ಕನ್ನಡವನ್ನು ಭಾಷೆ—I ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

→

## ಭಾಗ—IV : ಭಾಷೆ—I

### ಕನ್ನಡ

ಸೂಚನೆ: ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(91 ರಿಂದ 96)** ಸೂಕ್ತವಾದ ಆಯ್ಕೆಯನ್ನು ಆರಿಸಿ ಬರೆಯಿರಿ :

ನಾನೊಂದು ಮರವಾಗಿದ್ದರೆ
ಹಕ್ಕಿಗೂಡು ಕಟ್ಟುವ ಮುನ್ನ
ಕೇಳುತ್ತಿರಲಿಲ್ಲ ನೀನು ಯಾವ ಕುಲ
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಿಗಾಗುತ್ತಿರಲಿಲ್ಲ ಮೈಲಿಗೆ
ತಂಬೆಲರ ಕೂಡ ಎಲೆಗಳ ಸ್ನೇಹ
ಮಧುರವಾಗಿರುತ್ತಿತ್ತು
ಮಳೆ ಹನಿಗಳು ನಾನು ಶ್ವಪಚನೆಂದು
ಹಿಂದೆ ಸರಿಯುತ್ತಿರಲಿಲ್ಲ, ನಾನು
ಬೇರೂರಿ ಕುಡಿಯಿಡುತ್ತಿರುವಾಗ ಭೂದೇವಿ
ಮಡಿ ಮಡಿ ಎಂದು ಓಡುತ್ತಿರಲಿಲ್ಲ
ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ
ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಗಳಲ್ಲಿ
ಅಡರಿಕೊಂಡ ಮುಕ್ಕೋಟಿ ದೇವತೆಗಳು
ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು
ಯಾರಿಗೆ ಗೊತ್ತು
ನನ್ನ ಅಂತ್ಯಕಾಲದಲ್ಲಿ
ಕಡಿದು ತುಂಡಾದ ಒಣ ಸೀಳೊಂದು
ಹೋಮಾಗ್ನಿಯಲ್ಲಿ ಬೆಂದು
ಪಾವನವಾಗುತ್ತಿತ್ತೇನೊ
ಅಥವಾ
ಸತ್ಪುರುಷನೊಬ್ಬನ ಹೆಣಕ್ಕೆ ಚಟ್ಟವಾಗಿ
ನಾಲ್ಕು ಜನ ಸಜ್ಜನರ ಹೆಗಲೇರಬಹುದಿತ್ತೆ?

**91.** ಕವಿ ಮರವಾಗಿದ್ದರೆ ಏನೆಂದು ಪ್ರಶ್ನಿಸುತ್ತಿರಲಿಲ್ಲ?

(1) ಯಾವ ಕುಲ ಎಂದು

(2) ಯಾವ ದೇವರು ಎಂದು

(3) ಯಾವ ಹಕ್ಕಿ ಎಂದು

(4) ಯಾವ ಮರ ಎಂದು

**92.** ಕವಿ ಮರವಾಗಿದ್ದರೆ ಅದರ ನೆರಳಿಗೆ ಏನಾಗುತ್ತಿರಲಿಲ್ಲ?

(1) ಮಲ್ಲಿಗೆ

(2) ಮೈಲಿಗೆ

(3) ಬಲೆ

(4) ಸ್ನೇಹಿತ

**93.** ಕವಿ ಮರವಾಗಿದ್ದರೆ ಅದನ್ನು ಯಾವುದು ಅಪ್ಪಿಕೊಳ್ಳುತ್ತಿತ್ತು?

(1) ಬಿಸಿಲು

(2) ಮಳೆ

(3) ನೆರಳು

(4) ಹನಿ

**94.** ಕವಿ ಮರವಾಗಿದ್ದರೆ ಭೂದೇವಿ ಏನೆಂದು ಹೇಳುತ್ತಿರಲಿಲ್ಲ?

(1) ಓಡು ಓಡು

(2) ಬಿಡು ಬಿಡು

(3) ಮಡಿ ಮಡಿ

(4) ಒಡಿ ಒಡಿ

95. ಕವಿ ಮರವಾಗಿದ್ದರೆ ಅದರ ಒಣಸೀಳು ಯಾವುದರಲ್ಲಿ ಬೇಯುತ್ತಿತ್ತು?

(1) ಎಣ್ಣೆಯಲ್ಲಿ

(2) ಯಾವುದೂ ಅಲ್ಲ

(3) ಹೋಮಾಗ್ನಿಯಲ್ಲಿ

(4) ಬಿಸಿ ನೀರಿನಲ್ಲಿ

96. ಕವಿ ಮರವಾಗಿದ್ದರೆ ಅದರ ಒಣಸೀಳು ಬೆಂದು ಏನಾಗುತ್ತಿತ್ತು?

(1) ಪಾವನ

(2) ದೇವತೆ

(3) ಮೈಲಿಗೆ

(4) ಶ್ವಪಚ

ಸೂಚನೆ : ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದುದನ್ನು ಆರಿಸಿ ಉತ್ತರಿಸಿ (**97** ರಿಂದ **111**) :

97. ಭಾಷಾ ಕಲಿಕೆಯ ಪಠ್ಯವೊಂದರಲ್ಲಿ ಓದಬೇಕಾದ ಪಠ್ಯದಲ್ಲಿನ ಕೆಲ ಪದಗಳನ್ನು ಖಾಲಿ ಬಿಟ್ಟು ಅದನ್ನು ಕಲಿಯುವವರು ತುಂಬಿಕೊಂಡು ಓದಬೇಕೆಂದು ನಿರೀಕ್ಷಿಸಲಾಗುತ್ತದೆ. ಆ ಭಾಷಾ ಚಟುವಟಿಕೆಯ ಉದ್ದೇಶ ----- .

(1) ಹೊಸ ಪದಗಳ ಬಳಕೆಯ ಅಭಿವೃದ್ಧಿ

(2) ಸಂಕ್ಷೇಪಿಸುವ ಸಾಮರ್ಥ್ಯದ ಅಭಿವೃದ್ಧಿ

(3) ಬರವಣಿಗೆಯ ಸಾಮರ್ಥ್ಯದ ಅಭಿವೃದ್ಧಿ

(4) ಗ್ರಹಿಸುವ/ಗ್ರಹಿಕಾ ಸಾಮರ್ಥ್ಯದ ಅಭಿವೃದ್ಧಿ

98. ಕೆಳಗಿನ ಪ್ರಶ್ನೆ/ಹೇಳಿಕೆಗಳಲ್ಲಿ ಗ್ರಹಿಸುವ/ಗ್ರಹಿಕಾ ಸಾಮರ್ಥ್ಯವನ್ನು ಕುರಿತ ಪ್ರಶ್ನೆ/ಹೇಳಿಕೆ ಯಾವುದು?

(1) ನೋಬೆಲ್ ಬಹುಮಾನ ಗಳಿಸಿದ ಭಾರತೀಯ ಕವಿಯನ್ನು ಹೆಸರಿಸಿ

(2) 'ಕಿರಣ್ ದೇಸಾಯಿ'ಯವರ ಇನ್ನಾವುದಾದರೂ ಪುಸ್ತಕವನ್ನು ಓದಿದ್ದೀರಾ?

(3) 'ಎತ್ತಿಕೊಳ್ಳು' ಎಂಬ ಕ್ರಿಯಾರೂಪವನ್ನು ವಾಕ್ಯದಲ್ಲಿ ಬಳಸಿ

(4) 'ಪರ್ಯಾಯ' ಎಂಬ ಪದವನ್ನು ಇನ್ನೊಂದು ರೂಪದಲ್ಲಿ ಬರೆಯಿರಿ

99. ಮಕ್ಕಳು ಅರ್ಥಪೂರ್ಣವಾಗಿ ಬರೆಯುವುದನ್ನು ಕಲಿಯಲು ತಮ್ಮ ............. ಕೌಶಲ್ಯಗಳಾದ ಚಿತ್ರ ಬರೆಯುವಿಕೆ, ವೃತ್ತ, ಚೌಕ ಮೊದಲಾದ ಮೂಲಭೂತ ಆಕೃತಿಗಳ ರಚನೆಯ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು.

(1) ಭಾವನಾತ್ಮಕವಾದ

(2) ಉಳುವಿನ

(3) ಸಂವೇದನಾ

(4) ಚಾಲನ ವಲಯದ

100. ಸ್ನೇಹಯುತ ಪತ್ರ ಬರೆಯುವಾಗ, ಕಲಿಯುವವ ಕೆಳಗಿನ ಅಂಶಗಳಿಗೆ ಒತ್ತು ಕೊಡಬೇಕು

(1) ಎಲ್ಲರಿಗೂ ಅರ್ಥವಾಗುವ ಶೈಲಿ, ಸಂಕ್ಷಿಪ್ತ ರೂಪಗಳ ಬಳಕೆ, ಸ್ಪಷ್ಟವಾದ ಪತ್ರಲೇಖ ರೂಪ

(2) ವೈಯಕ್ತಿಕತೆ ಮತ್ತು ಯಾವುದೇ ಚೌಕಟ್ಟಿನ ಅಗತ್ಯವಿಲ್ಲ

(3) ಒಂದು ಬಗೆಯ ಪತ್ರಲೇಖದ ಚೌಕಟ್ಟು ವೈಯಕ್ತಿಕ ಛಾಪು, ಸಂಕ್ಷಿಪ್ತ ರೂಪಗಳು

(4) ಪತ್ರ ಬರವಣಿಗೆಯ ಚೌಕಟ್ಟನ್ನು ಅಚ್ಚುಕಟ್ಟಾಗಿ ಅನುಸರಿಸಿ ಆ ವೈಯಕ್ತಿಕ ಭಾಷೆಯನ್ನು ಬಳಸಬೇಕು

101. ಭಾಷಾ ಕಲಿಕೆಯಲ್ಲಿ ವಿದ್ಯಾರ್ಥಿಗಳು ಕಲಿಯಬೇಕಾದ ಭಾಷೆಯ ಲಿಪಿ ನಿಯಮಗಳ ಕಾರಣ, ಆ ಭಾಷೆಯಲ್ಲಿ ಮಾತಾಡಲು ಆತ್ಮವಿಶ್ವಾಸದ ಕೊರತೆಯಿಂದ ನರಳುತ್ತಾರೆ. ಇದನ್ನು ಕಡೆಗಾಣಿಸಲು ಒಂದು ವಿಧಾನವೆಂದರೆ

(1) ಮಾತುಕತೆಯನ್ನು ಒಳಗೊಂಡಂತಹ ಕ್ರೀಡಾರೂಪದ ಚಟುವಟಿಕೆಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳುವುದು.

(2) ವಿಶೇಷ ನುಡಿ ಚಿಕಿತ್ಸೆಯನ್ನು (speech therapy) ಕೊಡುವುದು.

(3) ತಪ್ಪುಗಳು ಆಗುತ್ತಿರುವಾಗ ಅವನ್ನು ತಕ್ಷಣವೇ ತಿದ್ದುವುದು.

(4) ಕಲಿಯುವವರನ್ನು ತರಗತಿಯಲ್ಲಿ ಓದಲು ಬಿಡುವುದು.

102. 'ಈ ದಿನದ ಪಾಠಕ್ಕೆ ನಾನು ಹಾಡೊಂದನ್ನು ಆರಿಸಿಕೊಂಡಿದ್ದೇನೆ. ಈ ಹಾಡನ್ನು ಕೇಳಿ ಪಾಠ ಕಲಿಯುವವರು ಖಾಲಿ ಇರುವ ಭಾಗಗಳನ್ನು ತುಂಬಬೇಕು. ಆ ನಂತರ ತುಂಬಿರುವುದನ್ನು ಸರಿಯೇ ಎಂದು ಗಮನಿಸೋಣ' ಮೇಲ್ಕಂಡ ಹೇಳಿಕೆ 'ಮಾಹಿತಿ...............' ಪರೀಕ್ಷಿಸುವ ಚಟುವಟಿಕೆ.

(1) ತಿದ್ದುಪಡಿ

(2) ಅಂತರ

(3) ವರ್ಗಾವಣೆ

(4) ವಿನಿಮಯ

103. ಮಕ್ಕಳು ವಯಸ್ಕರಿಗಿಂತಲೂ ಅತಿ ಸುಲಭವಾಗಿ ಅನ್ಯ ಭಾಷೆಯನ್ನು ಕಲಿಯುವ ವಯಸ್ಸು

(1) 8 ವರ್ಷಕ್ಕೆ ಮುಂಚೆ

(2) 8 ವರ್ಷದ ನಂತರ

(3) 10 ವರ್ಷಕ್ಕಿಂತ ಮುಂಚೆ

(4) 13 ವರ್ಷದ ನಂತರ

104. 'ಹೇಳಬೇಕಾದ ವಿಷಯಗಳ ತಿರುಳು ಹೆಚ್ಚಾದರೂ ಅದರ ಹೆಚ್ಚಳ ಆರ್ಥಿಕ ಭಾರವನ್ನು ಹೊರಿಸುವುದಿಲ್ಲ, ಅಲ್ಲದೇ ಇನ್ನೂ ಆಳವಾದ ಗ್ರಹಿಕೆಗೆ ಸಹಾಯಕವಾಗುತ್ತದೆ.' ಎಂಬ ಹೇಳಿಕೆ ಯಾವ ಮಾಧ್ಯಮವನ್ನು ಕುರಿತು ಹೇಳಿರುವಂತಹದ್ದು?

(1) ಎಲೆಕ್ಟ್ರಾನಿಕ್ಸ್

(2) ಹಲಗೆ, ಬಳಪ

(3) ಓವರ್‌ಹೆಡ್ ಪ್ರೊಜೆಕ್ಟರ್, ಸ್ಲೈಡ್ಸ್

(4) ಕಾಗದ

105. ಬಹುಭಾಷಕರಿಂದ ತುಂಬಿರುವ ತರಗತಿಯಲ್ಲಿ ಒಂದು ಭಾಷೆಯನ್ನು ಕಲಿಯುವಾಗ

(1) ಒಂದೇ ಭಾಷೆಯನ್ನಾಡುವ ವಿದ್ಯಾರ್ಥಿಗಳನ್ನು ಒಂದೆಡೆ ಕಲೆಹಾಕಬೇಕು.

(2) ಕಲಿಯಬೇಕಾದ ಭಾಷೆಯನ್ನು ಬಿಟ್ಟು ಇನ್ಯಾವ ಭಾಷೆಯನ್ನೂ ಬಳಸಕೂಡದು.

(3) ಭಾಷಾ ಕಲಿಕೆ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತದೆ.

(4) ಬಹು ಬಗೆಯ ಉಚ್ಚಾರಣಾ ರೀತಿಯನ್ನು, ವಾಕ್ಯರಚನಾ ಕ್ರಮಗಳನ್ನು ಕಲಿಯುವ ಮತ್ತು ಆ ಮೂಲಕ ಕಲಿಯಬೇಕಾದ ಭಾಷೆಯ ಮೇಲೆ ಪೂರ್ಣ ಪ್ರಭುತ್ವ ಸಾಧಿಸುವ ಅವಕಾಶ ದೊರೆಯುತ್ತದೆ.

106. ದ್ವಿತೀಯ ಭಾಷೆಯನ್ನು ಕಲಿಯುವಾಗ ಆ ಭಾಷೆಯ ಮೇಲಿನ ಅಪೂರ್ಣ ಪ್ರಭುತ್ವ ಮಾಹಿತಿಯ ಭಾಷಿಕ ವರ್ಗಾವಣೆಯನ್ನು ಕುಂಠಿತಗೊಳಿಸಬಹುದು. ಆಗ ಬೋಧಕರು

(1) ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಮೂಹಿಕ ಚಟುವಟಿಕೆಗಳನ್ನು ನೀಡಬೇಕು.

(2) ನಿಯತವಾಗಿ ಚಿಕಿತ್ಸಾತ್ಮಕ ಪರೀಕ್ಷೆಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕು.

(3) ಸತತವಾಗಿ ವಾಚನ ಚಟುವಟಿಕೆಗಳನ್ನು ಕ್ಲಿಷ್ಟಕರ ಪಠ್ಯಗಳೊಂದಿಗೆ ನಡೆಸಬೇಕು.

(4) ಪ್ರಥಮ ಭಾಷೆ ಮತ್ತು ದ್ವಿತೀಯ ಭಾಷೆ ಎರಡರಲ್ಲೂ ಒಂದೇ ಬಗೆಯ ಭಾಷಿಕ ಚಟುವಟಿಕೆಗಳನ್ನು ಕೊಡುವುದರ ಮೂಲಕ ವಿದ್ಯಾರ್ಥಿಗಳ ಕೌಶಲ್ಯವನ್ನು ಅಭಿವೃದ್ಧಿ ಪಡಿಸಬೇಕು.

107. ಸಮ್ಮಿಶ್ರ ಮಟ್ಟದ ಕೌಶಲ್ಯಗಳನ್ನು ಹೊಂದಿರುವಂತಹ ತರಗತಿಯಲ್ಲಿ ಬೋಧಕರು.

(1) ಅವರವರ ಪೋಷಕರನ್ನು ಭೇಟಿಮಾಡಿ ಕೊಟ್ಟ ಮನೆಗೆಲಸವನ್ನು ಪೂರ್ತಿಗೊಳಿಸಲು ಸಹಾಯ ಮಾಡಲು ತಿಳಿಸಬೇಕು.

(2) ಎಲ್ಲರೂ ಸೇರಿ ಸಾಮೂಹಿಕವಾಗಿ ಮಾಡಬೇಕಾದ ಕ್ರಿಯಾ ಚಟುವಟಿಕೆಗಳನ್ನು ರೂಪಿಸಿ ಅವರನ್ನು ಸಾಮಾಜಿಕ ಚಟುವಟಿಕೆಗಳಿಗೆ ತೊಡಗಿಕೊಳ್ಳಲು ಸೂಕ್ತವಾಗುವಂತೆ ರೂಪಿಸಬೇಕು.

(3) ವಿದ್ಯಾರ್ಥಿಗಳನ್ನು ಶಾಲೆಯ ನಂತರ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಬೇಕು.

(4) ಮನೋತಜ್ಞರನ್ನು ಕಾಲಕಾಲಕ್ಕೆ ಕರೆಸಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರಿತುಕೊಳ್ಳಬೇಕು.

108. ಕೆಲವು ಬಾರಿ ಪಠ್ಯಪುಸ್ತಕದ ಪ್ರಶ್ನೆಗಳು ನೀರಸವೆನಿಸಬಹುದು. ಆಗ ಬೋಧಕರು

(1) ಪಠ್ಯದ ಪ್ರಶ್ನೆಗಳಿಗೇ ಅಂಟಿಕೊಳ್ಳಬೇಕು.

(2) ಹೆಚ್ಚುವರಿ ಪಠ್ಯಗಳನ್ನು ಕೊಡಬೇಕು.

(3) ಸೃಜನಶೀಲ ಮತ್ತು ಸಮಸ್ಯಾನಿವಾರಕ ಚಟುವಟಿಕೆಗಳನ್ನು ನೀಡಬೇಕು.

(4) ಇನ್ನೊಂದು ಪಠ್ಯವನ್ನು ತಯಾರಿಸಬೇಕು.

109. ಇಂಗ್ಲೀಷ್ ತರಹದ ಭಾಷೆಗಳನ್ನು ಕಲಿಯುವಾಗ ಸ್ಪೆಲ್ಲಿಂಗ್ ಕಾರಣದಿಂದ ವಿದ್ಯಾರ್ಥಿಗಳು ಓದುವಾಗ ಸಮಸ್ಯೆಯಲ್ಲಿ ಸಿಲುಕಬಹುದು. ಆಗ ವಿದ್ಯಾರ್ಥಿಗಳು

(1) ಸ್ಪೆಲ್ಲಿಂಗ್ ಮತ್ತು ಉಚ್ಚಾರಣೆಯನ್ನು ಹೊಂದಿಸಿಕೊಳ್ಳುತ್ತಾ ಗಟ್ಟಿಯಾಗಿ ಓದಬೇಕು.

(2) ಆ ಪದಗಳನ್ನು ಓದುವಾಗ ಸರಿಯಾದ ಉಚ್ಚಾರಣೆಯನ್ನು ಕೇಳಿಸಿಕೊಂಡು ಅದೇ ತರಹ ಉಚ್ಚರಿಸಬೇಕು.

(3) ಬೋಧಕರ ಉಚ್ಚಾರಣೆಯನ್ನು ಅನುಸರಿಸ ಬೇಕು.

(4) ತಮಗೆ ತಾವೇ ಕಷ್ಟವೆನಿಸಿದ ಪದವನ್ನು ಮತ್ತೆ ಮತ್ತೆ ಓದಿಕೊಳ್ಳಬೇಕು.

110. ಶಾಲಾ ತರಗತಿಯೊಂದರಲ್ಲಿ ವಿಭಿನ್ನ ಸಾಮರ್ಥ್ಯದ (specially abled) ವಿದ್ಯಾರ್ಥಿಗಳನ್ನು ಆತ್ಮವಿಶ್ವಾಸ ಮತ್ತು ಆತ್ಮಸಮ್ಮಾನದೊಂದಿಗೆ ಭಾಗವಹಿಸುವಂತೆ ಮಾಡಲು

(1) ಅದಕ್ಕೆಂದೇ ನುರಿತ ಅಧ್ಯಾಪಕರನ್ನು ನೇಮಿಸಬೇಕು.

(2) ಅಂತಹ ವಿದ್ಯಾರ್ಥಿಗಳನ್ನು ಕಳುಹಿಸಿ ಇತರ ವಿದ್ಯಾರ್ಥಿಗಳಿಂದ ಬೇರ್ಪಡಿಸಬೇಕು.

(3) ಅವರಿಗೆ ಪ್ರತ್ಯೇಕ ಪಠ್ಯಗಳನ್ನು ಕೊಡಬೇಕು.

(4) ಪರಸ್ಪರ ಚರ್ಚೆ, ವಿನಿಮಯ ಮತ್ತು ಸಹಕಾರಯುಕ್ತ ಅವಕಾಶವನ್ನು ಕಲ್ಪಿಸಿಕೊಡಬೇಕು.

111. ಪಾರಂಪರಿಕ ಭಾಷಾ ತರಗತಿಗಳು ಬೋಧಕ ಕೇಂದ್ರೀಕೃತ ಮತ್ತು ಆಧುನಿಕ ಭಾಷಾ ತರಗತಿಗಳು ವಿದ್ಯಾರ್ಥಿ ಕೇಂದ್ರಿತ ಎಂಬ ಹೇಳಿಕೆಯಲ್ಲಿ 'ವಿದ್ಯಾರ್ಥಿ ಕೇಂದ್ರಿತ' ಎಂಬುದರ ಗುಣಲಕ್ಷಣಗಳನ್ನು ಗುರುತಿಸಿ.

(1) ಬೋಧಕರು ವಿದ್ಯಾರ್ಥಿಗಳಿಗೆ ಉತ್ತೇಜನ, ಪ್ರಚೋದನೆ, ಬೆಂಬಲ ಮತ್ತು ಮಾಹಿತಿಯನ್ನು ನೀಡುತ್ತಾರೆ; ವಿದ್ಯಾರ್ಥಿಗಳು ನಿರ್ದೇಶಿಸಲ್ಪಟ್ಟ ಭಾಷಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

(2) ವಿದ್ಯಾರ್ಥಿಗಳು ಬೋಧಕರನ್ನು ಬರವಣಿಗೆ, ಮಾತುಕತೆ ಎಲ್ಲದರಲ್ಲೂ ಅನುಕರಿಸುತ್ತಾರೆ.

(3) ಬೋಧಕರು ಎಲ್ಲಾ ಕಲಿಕಾ ಚಟುವಟಿಕೆಗಳ ಉಸ್ತುವಾರಿದಾರರಾಗಿದ್ದು ವಿದ್ಯಾರ್ಥಿಗಳ ಅಗತ್ಯವನ್ನು ನಿರ್ಧರಿಸುತ್ತಾರೆ.

(4) ವಿದ್ಯಾರ್ಥಿಗಳು ತರಗತಿಯ ಹೊರಗೆ ಸ್ವಂತ ಕಲಿತು ನಿಯತವಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಾರೆ.

ಸೂಚನೆ: ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(112 ರಿಂದ 120)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ :

ನಾನು ಚಿಕ್ಕಂದಿನಲ್ಲೇ ಗೀಜಗನ ಗೂಡನ್ನು ನೋಡಿದ್ದೆನಾದರೂ ಅದನ್ನು ಸವಿವರವಾಗಿ ಅಭ್ಯಾಸ ಮಾಡಿದ್ದು ಶಿವಮೊಗ್ಗಾದಲ್ಲಿ. ಅನುಕೂಲವಾದ ಪರಿಸರ ಸಿಕ್ಕರೆ ಹಕ್ಕಿಗಳ ಸಂಖ್ಯೆ ಹೇಗೆ ಹೆಚ್ಚುತ್ತದೆ ಎನ್ನುವುದಕ್ಕೆ ಶಿವಮೊಗ್ಗಾ ಜಿಲ್ಲೆ ಒಂದು ಉದಾಹರಣೆ. ಶಿವಮೊಗ್ಗಾ ಜಿಲ್ಲೆಗೆ ಗಾಜನೂರು ಮತ್ತು ಲಕ್ಕವಳ್ಳಿ ನಾಲೆ ನೀರು ಬರಲು ನಾಲೆ ನೀರು ಬರಲು ಆರಂಭವಾದೊಡನೆ ಅಲ್ಲಿ ಎಲ್ಲೋ ಅಪರೂಪಕ್ಕೆ ಹೊಳೆ ದಡದಲ್ಲಿ ಕಾಣಬರುತ್ತಿದ್ದ ಗೀಜಗನ ಗೂಡುಗಳು ಈಗ ಎಲ್ಲೆಂದರಲ್ಲಿ ಕಾಣುತ್ತವೆ. ಇದಕ್ಕೆ ಮುಖ್ಯ ಕಾರಣ ಆ ಜಿಲ್ಲೆಯಲ್ಲಿ ನಾಲಾ ನೀರಿನ ಆಧಾರದ ಮೇಲೆ ಭತ್ತ ಬೆಳೆಯುವುದರಿಂದ ಎಲ್ಲ ಋತುಮಾನಗಳಲ್ಲೂ ಒಂದಲ್ಲಾ ಒಂದು ಕಡೆ ಕುಯ್ಲಿಗೆ ಬಂದ ಭತ್ತದ ಬೆಳೆ ಇದ್ದೇ ಇರುತ್ತದೆ. ಗೀಜಗನ ಹಕ್ಕಿಗಳಿಗೆ ಇಲ್ಲಿ ವರ್ಷವಿಡೀ ನಿರಂತರವಾಗಿ ಆಹಾರ ಸಿಗುತ್ತದೆ. ರೈತರು ಭತ್ತದ ಜೊತೆ ಕಬ್ಬನ್ನೂ ಬೆಳೆಯುವುದರಿಂದ ಗೀಜಗನ ಹಕ್ಕಿಗಳಿಗೆ ಗೂಡು ಕಟ್ಟಲು ಅಗತ್ಯವಾದ ನಾರು ಸಹ ನಿರಾಯಾಸವಾಗಿ ಸಿಗುತ್ತದೆ. ಗೀಜಗನ ಹಕ್ಕಿಗಳು ಈಗ ಹಳ್ಳ ಕೊಳ್ಳ ಗುಂಡಿಗಳತ್ತ ಬಾಗಿರುವ ಪ್ರತಿಯೊಂದು ಕೊಂಬೆಗಳ ಮೇಲೂ ಕಬ್ಬಿನ ಗರಿಗಳನ್ನು ಸೀಳಿ ಸಂಪಾದಿಸಿದ ನಾರಿನಿಂದ ಸಾಲು ಸಾಲು ಗೂಡುಗಳನ್ನು ನಿರ್ಮಿಸುತ್ತವೆ. ಆದರೆ ಗೀಜಗನ ಗೂಡುಗಳಿಂದ ತೊಂದರೆಗೊಳಗಾಗಿರುವವರೆಂದರೆ ಟೆಲಿಫೋನ್ ಮತ್ತು ವಿದ್ಯುಚ್ಛಕ್ತಿ ಇಲಾಖೆಯವರು. ಕಬ್ಬಿನ ಗದ್ದೆಗಳ ಬಳಿ ಎಳೆದಿರುವ ತಂತಿಗಳ ಮೇಲೆ ಸಾಲು ಸಾಲಾಗಿ ಜೋತಾಡುತ್ತಿರುವ ಸಾವಿರಾರು ಗೀಜಗನ ಗೂಡನ್ನು ನೋಡಬಹುದು. ವಿದ್ಯುತ್ತಂತಿಗಳಿಗೆ ಕಟ್ಟಿದ ಗೂಡೇನೂ ಬೀಳುವುದಿಲ್ಲ. ಆದರೆ ಕೊಂಬೆಯ ಮೇಲೆ ಗೂಡು ಕಟ್ಟಿದಾಗ ಅತ್ತಿತ್ತ ಜಾರದ ಹಾಗೆ ಬಿಗಿಯುವಂತೆ ತಂತಿಯ ಮೇಲೆ ಕಟ್ಟಿದಾಗ ಸಾಧ್ಯವಾಗುವುದಿಲ್ಲ. ವಿದ್ಯುತ್ತಂತಿಗೆ ಕೊಂಬೆಗಳಂತೆ ಅಡ್ಡ ಕವಲುಗಳಿರುವುದಿಲ್ಲ. ಕೆಳಗೆ ಬೀಳದಂತೆ ಭದ್ರವಾಗಿ ಬಿಗಿದರೂ ಅಡ್ಡಡ್ಡಲಾಗಿ ಅವನ್ನು ಸುಲಭವಾಗಿ ಜರುಗಿಸಬಹುದು. ಜೋರಾಗಿ ಗಾಳಿ ಬೀಸಿದಾಗ ಅಷ್ಟು ಗೂಡುಗಳೂ ಜಾರಿ ಜರುಗುತ್ತಾ ಕಂಬದ ಇನ್ಸುಲೇಟರ್ ಬಳಿ ಎಲ್ಲ ಪಿಂಡಿ ಕಟ್ಟಿದಂತೆ ಸಿಕ್ಕಿಕೊಂಡು ಮಳೆ ಬಂದ ಕೂಡಲೇ ತೊಯ್ದು ಗೂಡುಗಳಿಂದ ಷಾರ್ಟ್ ಸರ್ಕ್ಯೂಟ್ ಪ್ರಾರಂಭವಾಗುತ್ತದೆ. ಗೀಜಗನ ಹಕ್ಕಿಗಳಿಂದ, ಗೂಡುಗಳಿಂದ ರೈತರಿಗೆ ಹೆಚ್ಚಿನ ತೊಂದರೆ ಇಲ್ಲದಿದ್ದರೂ ಸರ್ಕಾರಿ ಇಲಾಖೆಗಳಿಗೆ ತೊಂದರೆಯಾಗುತ್ತಿರುವುದರ ಅಪರೂಪದ ಉದಾಹರಣೆ ಇದು.

**112.** ಗೀಜಗನ ಹಕ್ಕಿಗಳಿಗೆ ಶಿವಮೊಗ್ಗಾದಲ್ಲಿ ವರ್ಷವಿಡೀ ಸುಲಭವಾಗಿ ಸಿಕ್ಕುವ ಆಹಾರ ಯಾವುದು?

(1) ಗೋಧಿ

(2) ಕಬ್ಬು

(3) ಭತ್ತ

(4) ರಾಗಿ

**113.** ಶಿವಮೊಗ್ಗಾ ಜಿಲ್ಲೆಗೆ ಹರಿಯುವ ನಾಲೆ ನೀರು ಎಲ್ಲಿಂದ ಹರಿದು ಬರುತ್ತದೆ?

(1) ಎರಡೂ ಅಲ್ಲ

(2) ಎರಡೂ ಹೌದು

(3) ಗಾಜನೂರು

(4) ಲಕ್ಕವಳ್ಳಿ

114. ಗೀಜಗನ ಹಕ್ಕಿಗೆ ಗೂಡು ಕಟ್ಟಲು ಅಗತ್ಯವಾದದ್ದು ಏನು?

(1) ನಾರು

(2) ನೀರು

(3) ನಾಲೆ

(4) ಮಳೆ

115. ಮೇಲಿನ ಗದ್ಯದಲ್ಲಿ ಹೇಳಿದ ಹಾಗೆ ಗೂಡು ಕಟ್ಟಲು ಅವಶ್ಯಕವಿರುವ ನಾರು ಗೀಜಗನ ಹಕ್ಕಿಗಳಿಗೆ ಎಲ್ಲಿಂದ ದೊರೆಯುತ್ತದೆ?

(1) ಭತ್ತ

(2) ಕಬ್ಬು

(3) ನಾಲೆ

(4) ಮರ

116. ಮೇಲಿನ ಗದ್ಯದ ಲೇಖಕ ಗೀಜಗನ ಹಕ್ಕಿಗಳ ಕಡೆಗೆ ಗಮನ ಹರಿಸಿದ್ದು ಯಾವ ಸ್ಥಳದಲ್ಲಿ?

(1) ಗಾಜನೂರು

(2) ಲಕ್ಕವಳ್ಳಿ

(3) ಚಿಕ್ಕಮಗಳೂರು

(4) ಶಿವಮೊಗ್ಗ

117. ಶಿವಮೊಗ್ಗದಲ್ಲಿ ಬೆಳೆಯುವ ಪ್ರಮುಖ ಬೆಳೆಗಳು ಯಾವುವು?

(1) ಎರಡೂ ಅಲ್ಲ

(2) ಎರಡೂ ಹೌದು

(3) ಭತ್ತ

(4) ಕಬ್ಬು

118. ಶಿವಮೊಗ್ಗಾ ಜಿಲ್ಲೆಯ ಭತ್ತದ ವ್ಯವಸಾಯಕ್ಕೆ ಮೂಲ ಆಧಾರ ಯಾವುದು?

(1) ಮಳೆ

(2) ಏತ ನೀರಾವರಿ

(3) ನಾಲೆ ನೀರಾವರಿ

(4) ಕೆರೆ ನೀರಾವರಿ

119. ಗೀಜಗನ ಗೂಡುಗಳಿಂದ ತೊಂದರೆಗೆ ಒಳಗಾದ ಸರ್ಕಾರಿ ಇಲಾಖೆಗಳು ಯಾವುದು?

(1) ಯಾವುದೂ ಅಲ್ಲ

(2) ಎರಡೂ ಹೌದು

(3) ಟೆಲಿಫೋನ್

(4) ವಿದ್ಯುಚ್ಛಕ್ತಿ

120. ಗೀಜಗನ ಗೂಡು ವಿದ್ಯುತ್ ತಂತಿಯ ಮೇಲೆ ಕಟ್ಟಿದಾಗ ಆಗುವ ಅನಾಹುತ

(1) ಲೋ ವೋಲ್ಟೇಜ್

(2) ಯಾವುದೂ ಅಲ್ಲ

(3) ಹೈ ವೋಲ್ಟೇಜ್

(4) ಷಾರ್ಟ್ ಸರ್ಕ್ಯೂಟ್

ಅಭ್ಯರ್ಥಿಗಳು ಕನ್ನಡವನ್ನು ಭಾಷೆ—**II** ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

→

## ಭಾಗ—V : ಭಾಷೆ—II

## ಕನ್ನಡ

ಸೂಚನೆ: ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(121 ರಿಂದ 126)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ :

ಈ ಕಾವ್ಯದ ನಾಯಕ ಕುಮಾರರಾಮ. ಇವನ ತಂದೆ ಕಂಪಿಲರಾಯ. ಇಬ್ಬರೂ ಕಂಪಲಿ ಅರಸು ಮನೆತನದ ಪ್ರಭಾವಿ ನಾಯಕರು. ಕಾಲದ ದೃಷ್ಟಿಯಿಂದ ಈ ಅರಸು ಮನೆತನ ಅಲ್ಪಾವಧಿಯದಾಗಿದ್ದರೆ, ಪ್ರಾದೇಶಿಕ ವ್ಯಾಪ್ತಿಯಲ್ಲಿ ಚಿಕ್ಕದಾಗಿತ್ತು. ಮೂಲತಃ ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳಿಂದ ಕೂಡಿದ್ದು ಮುಂದೆ—ಬೆಳೆದು ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳನ್ನು ಒಳಗೊಂಡಿತೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಕೇವಲ ಅರ್ಧ ಶತಮಾನ ಬಾಳಿ ಅಳಿದ ಸಣ್ಣ ಅರಸು ಮನೆತನವಿದು. ಲಭ್ಯವಿರುವ ಅಲ್ಪ ಆಧಾರಗಳಿಂದ ಪ್ರಸ್ತುತ ಅರಸು ಮನೆತನದ ಸಮಗ್ರ ಇತಿಹಾಸವನ್ನು ರೂಪಿಸುವುದು ಕಷ್ಟ ಎಂಬುದು ಇತಿಹಾಸಕಾರರ ಅಭಿಪ್ರಾಯ. ನಂಜುಂಡ ಕವಿ ರಾಮನಾಥ ಚರಿತೆಯನ್ನು ಬರೆಯುವ ಕಾಲಕ್ಕೂ ಕಂಪಿಲರಾಯ, ಕುಮಾರರಾಮರು ರಾಜ್ಯವಾಳಿದ ಕಾಲಕ್ಕೂ ಸುಮಾರು ಎರಡು ನೂರು ವರ್ಷಗಳ ಅಂತರವಿದೆ. ಇನ್ನೂರು ವರ್ಷಗಳ ಹಿಂದಿನ ಐತಿಹಾಸಿಕ ಘಟನೆ ಸನ್ನಿವೇಶಗಳನ್ನು ತನ್ನ ಕಾವ್ಯದ ವಸ್ತುವನ್ನಾಗಿ ಮಾಡಿಕೊಳ್ಳುವ ಸಂದರ್ಭದಲ್ಲಿ ನಂಜುಂಡ ಯಾವ ಮೂಲದಿಂದ ಇತಿಹಾಸವನ್ನು ಪಡೆದುಕೊಂಡ? ಎಂಬುದು ಅತ್ಯಂತ ಕುತೂಹಲದ ಸಂಗತಿ. ಅಲ್ಲದೆ ಪ್ರಾದೇಶಿಕವಾಗಿ ಕವಿ ಪರಿಸರಕ್ಕಿಂತ ಈ ಕಾವ್ಯಪರಿಸರ ದೂರವಾಗಿದೆ. ಕಾಲ ಹಾಗೂ ಪ್ರದೇಶಗಳ ಈ ದೀರ್ಘ ಅಂತರವನ್ನು ತನ್ನದೇ ರೀತಿಯಲ್ಲಿ ಕವಿ ಅರಗಿಸಿಕೊಂಡಿದ್ದು ಗಮನಾರ್ಹ. ಕುಮಾರರಾಮನ ಜೀವನ, ಅವನು ಬದುಕಿರುವಾಗ ಅಥವಾ ಮರಣಾನಂತರ ಐತಿಹ್ಯವಾಗಿ ಜನಮನದಲ್ಲಿ ಹರಡಿಕೊಂಡಿತೆಂಬುದು ಒಪ್ಪಿತ ಅಭಿಪ್ರಾಯ.

**121.** ನಂಜುಂಡ ಕವಿ ರಾಮನಾಥ ಚರಿತೆಯನ್ನು ಬರೆಯುವ ಕಾಲಕ್ಕೂ ಕಂಪಲಿ ರಾಯನ ಕಾಲಕ್ಕೂ ಇರುವ ಅಂತರವೇನು

(1) 200 ವರ್ಷ

(2) ಒಂದು ಸಹಸ್ರಮಾನ

(3) 500 ವರ್ಷ

(4) ಒಂದು ಶತಮಾನ

**122.** ಕಂಪಲಿ ಅರಸು ಮನೆತನದ ಕಾಲಾವಧಿ

(1) ಮಧ್ಯಮಾವಧಿ.

(2) ಯಾವುದೂ ಅಲ್ಲ.

(3) ದೀರ್ಘಾವಧಿ.

(4) ಅಲ್ಪಾವಧಿ.

**123.** ಮೇಲೆ ಹೇಳಿದ ಗದ್ಯದಲ್ಲಿ ಬರುವ ಕಾವ್ಯಕ್ಕೆ ನಾಯಕನಾದ ಐತಿಹಾಸಿಕ ವ್ಯಕ್ತಿ ಯಾರು?

(1) ಕುಮಾರರಾಮ.

(2) ಯಾವುದೂ ಅಲ್ಲ.

(3) ಕಂಪಿಲರಾಯ.

(4) ನಂಜುಂಡ.

**124.** ಕಂಪಲಿ ಮನೆತನ ಎಷ್ಟು ಕಾಲ ಬಾಳಿತ್ತು?

(1) ಅರ್ಧ ದಶಮಾನ.

(2) ಯಾವುದೂ ಅಲ್ಲ.

(3) ಅರ್ಧ ಸಹಸ್ರಮಾನ.

(4) ಅರ್ಧ ಶತಮಾನ.

**125.** ಕುಮಾರರಾಮನ ತಂದೆಯ ಹೆಸರು

(1) ಕಪಿಲರಾಯ.

(2) ನಂಜುಂಡ.

(3) ಕಂಪಿಲರಾಯ.

(4) ರಾಮರಾಯ.

**126.** ಕುಮಾರರಾಮನನ್ನು ಕುರಿತು ಕಾವ್ಯ ಬರೆದಿರುವುದು ಯಾರು?

(1) ನಂಜುಂಡ.

(2) ಅಂಡಯ್ಯ.

(3) ಮುದ್ದಣ್ಣ.

(4) ಕಂಪಿಲರಾಯ.

ಸೂಚನೆ: ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ (**127** ರಿಂದ **141**) :

**127.** ಈ ಕೆಳಗಿನ ಓದುವಿಕೆಯ ಪ್ರಶ್ನೆಗೆ ಹೇಗೆ ಅಂಕ ನೀಡುವಿರಿ?

ಪ್ರಶ್ನೆ: ಹುಲಿಯು ನಶಿಸಿಹೋಗಿರುವ ಪ್ರಾಣಿಯೇ?

ಉತ್ತರ (1) ಇಲ್ಲ, ಅಪರೂಪವಾಗುತ್ತಿರುವ ಪ್ರಾಣಿ

ಉತ್ತರ (2) ಹುಲಿಯು ನಶಿಸಿಹೋಗುತ್ತಿರುವ ಪ್ರಾಣಿ

(1) ಉತ್ತರ (2)ಕ್ಕೆ ½ ಅಂಕ, ಉತ್ತರ (1)ಕ್ಕೆ 1 ಅಂಕ

(2) ಉತ್ತರ (2)ಕ್ಕೆ 1 ಅಂಕ, ಉತ್ತರ (1)ಕ್ಕೆ 1 ಅಂಕ

(3) ಉತ್ತರ (2)ಕ್ಕೆ 1 ಅಂಕ, ಉತ್ತರ (1)ಕ್ಕೆ 0 ಅಂಕ

(4) ಉತ್ತರ (1)ಕ್ಕೆ ½ ಅಂಕ, ಉತ್ತರ (2)ಕ್ಕೆ 1 ಅಂಕ

**128.** ಕೊಟ್ಟಿರುವ ಪಠ್ಯ ಉಪಯುಕ್ತವೇ, ಇಲ್ಲವೇ ಎಂಬುದನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಹೇಳಿಕೊಡು ಓದುವಿಕೆಯ ತಂತ್ರ (reading strategy)

(1) ಊಹಿಸುವಿಕೆ

(2) ಸಂಕ್ಷೇಪಿಸುವಿಕೆ

(3) ಸ್ಕ್ಯಾನಿಂಗ್

(4) ಸ್ಕಿಮ್ಮಿಂಗ್

**129.** ವಿದ್ಯಾರ್ಥಿಗಳು 'ಮಹಾಕಾವ್ಯಗಳ ರಹಸ್ಯ' ಎಂಬ ನಾಟಕ ಬರೆಯುತ್ತಾರೆ. ಅದರಲ್ಲಿ ನಾಲ್ಕು ಪಾತ್ರಗಳು ಮತ್ತು ಹತ್ತು ಸಾಲುಗಳಿವೆ. ಪ್ರತೀ ಪಾತ್ರ ಒಂದು ಬಗೆಯ ವಾಕ್ಯರಚನೆಗಳನ್ನು ಮಾತ್ರ ಬಳಸುತ್ತದೆ. ಈ ಬಗೆಯ ಚಟುವಟಿಕೆ ಕೆಳಗಿನ ಯಾವ ಕೌಶಲ್ಯಕ್ಕೆ ಸಂಬಂಧಿಸಿದ್ದು?

(1) ಓದುವಿಕೆಯ ನಂತರದ ಚಟುವಟಿಕೆ.

(2) ಬರಹ ಪೂರ್ವ ಚಟುವಟಿಕೆ.

(3) ವ್ಯಾಕರಣ ಅನ್ವಯ.

(4) ಪದಕೋಶ ಅಭಿವೃದ್ಧಿ.

**130.** ಮೂರನೇ ತರಗತಿಯ ವಿದ್ಯಾರ್ಥಿಗಳ ಸೃಜನಶೀಲ ಓದುವಿಕೆಗೆ ಬಹಳ ಉಪಯುಕ್ತವಾದ ಪ್ರವೇಶಿಕೆ ಯಾವುದು?

(1) ಚಿತ್ರ ಇಲ್ಲವೇ ಭಾವಚಿತ್ರಗಳನ್ನು ಬಳಸಿ ಚರ್ಚಿಸುವುದು.

(2) ವಿದ್ಯಾರ್ಥಿಗಳನ್ನು ಅವರವರಿಷ್ಟಕ್ಕೆ ತಕ್ಕಂತೆ ಬರೆಯಲು ಹೇಳುವುದು.

(3) ವಿವರವಾದ ಚರ್ಚೆ.

(4) ಹಲಗೆಯ ಮೇಲೆ ಸ್ಥೂಲ ವಿವರಣೆ ಕೊಡುವುದು.

**131.** ನಿಮ್ಮ ತರಗತಿಯಲ್ಲಿ ಕಲಿಯುವವರು ಇಂಗ್ಲೀಷ್‌ನಲ್ಲಿ ಮಾತಾಡಲು ಹಿಂಜರಿಯುತ್ತಿದ್ದಾರೆ. ಆ ಹಿಂಜರಿಕೆಯನ್ನು ಹೋಗಲಾಡಿಸಲು ನೀವೇನು ಕ್ರಮ ಕೈಗೊಳ್ಳುವಿರಿ?

(1) ತರಗತಿಗೆ ಪೂರ್ವಸಿದ್ಧತೆಯಿಲ್ಲದೆ ಬಹು ಸುಲಭವಾದ ವಿಷಯಗಳನ್ನು ಕೊಡುವುದು.

(2) ಅಂತಹ ವಿದ್ಯಾರ್ಥಿಗಳನ್ನು ತಮ್ಮ ವಿಚಾರ ಮಂಡಿಸಲು ಕೊನೆಯಲ್ಲಿ ಅವಕಾಶ ನೀಡುವುದು.

(3) ವೈಯಕ್ತಿಕವಾಗಿ ಇಂಗ್ಲೀಷ್ ಪಾಠ ಹೇಳುವುದು.

(4) ಚಿಕ್ಕ ಗುಂಪುಗಳಲ್ಲಿ ವಿದ್ಯಾರ್ಥಿಗಳನ್ನು ಜೊತೆ ಮಾಡಿ ಸ್ವಂತ ಬರಹಗಳನ್ನು ಹೊರತರುವ ಹಾಗೆ ಮಾಡುವುದು.

132. ಶ್ರವಣ ಕೌಶಲ್ಯವನ್ನು ಅಭ್ಯಸಿಸಲು, ಬೋಧಕರು ವಿದ್ಯಾರ್ಥಿಗಳಿಗೆ ರೈಲ್ವೆಯ ಪ್ರಕಟಣೆಯನ್ನು ಕೇಳಿ ರೈಲುಗಳು ಬರುವ ಮತ್ತು ಹೊರಡುವ ವೇಳಾಪಟ್ಟಿಯನ್ನು ಸಿದ್ಧಪಡಿಸಲು ಹೇಳಿದ್ದಾರೆ. ಇಲ್ಲಿ ವಿದ್ಯಾರ್ಥಿಗಳು ..................... .

(1) ಒಂದು ಪ್ರಕಟಣೆಯನ್ನು ಗಟ್ಟಿಯಾಗಿ ಓದುತ್ತಿದ್ದಾರೆ.

(2) ಒಂದು ಸಿದ್ಧ ಪಟ್ಟಿಯನ್ನು ಅರ್ಥೈಸುತ್ತಿದ್ದಾರೆ.

(3) ಕಿರುಚಿತ್ರವೊಂದನ್ನು ನೋಡುತ್ತಿದ್ದಾರೆ.

(4) ಶ್ರವ್ಯ ಧ್ವನಿಸುರುಳಿಯೊಂದನ್ನು ಕೇಳಿಸಿಕೊಂಡು ವೇಳಾಪಟ್ಟಿಯನ್ನು ಸಿದ್ಧಪಡಿಸುತ್ತಿದ್ದಾರೆ.

133. ಪ್ರೌಢಾವಸ್ಥೆಯ ನಂತರ ಹೊಸ ಭಾಷೆಯನ್ನು ಕಲಿಯುವಾಗ .................. .

(1) ಸಾಧಾರಣ ಪ್ರಭುತ್ವ ದೊರಕುತ್ತದೆ.

(2) ಭಾಷೆಯ ಗಳಿಕೆ ತುಸು ಕಷ್ಟಕರವಾಗುತ್ತದೆ.

(3) ಪ್ರಭುತ್ವ ದಕ್ಕುವುದಿಲ್ಲ.

(4) ಪ್ರಭುತ್ವ ಅತೀ ಹೆಚ್ಚಾಗುತ್ತದೆ.

134. ಇ-ಕಲಿಕೆಯು (e-Learning)

(1) ದೂರ ಶಿಕ್ಷಣದ ಒಂದು ಬಗೆ.

(2) ಸಾಕ್ಷ್ಯ ಚಿತ್ರೀಕರಣ.

(3) ತಾಂತ್ರಿಕತೆಯ ಸಹಾಯದೊಂದಿಗೆ ಕಲಿಯುವುದರ ಸಮ್ಮಿಶ್ರ ವಿಧಾನ.

(4) ಯಾಂತ್ರಿಕ ಸಲಕರಣೆಗಳ ಸಮ್ಮಿಲನ.

135. ದ್ವಿಭಾಷಿಕ ತರಗತಿಯಲ್ಲಿ, ವಿದ್ಯಾರ್ಥಿಗಳಿಗೆ ಕಲಿಯುತ್ತಿರುವ ಭಾಷೆಯಲ್ಲಿ ಬರಹ ಮತ್ತು ಆಡುಮಾತಿನ ವ್ಯತ್ಯಾಸವನ್ನರಿಯಲು

(1) ಕಲಿಯುತ್ತಿರುವ ಭಾಷೆಯಲ್ಲಿ ಹೆಚ್ಚಿನ ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸಬೇಕು.

(2) ಇಂಗ್ಲಿಷ್ ಭಾಷೆಯಲ್ಲಿ ಬರೆಯಲು ಹೇಳಬೇಕು.

(3) ಕಲಿಯುತ್ತಿರುವ ಭಾಷೆಯ ದ್ವಿಭಾಷಿಕ ಚಲನಚಿತ್ರಗಳನ್ನು ನೋಡಲು ಹೇಳಬೇಕು.

(4) ಕಲಿಯುತ್ತಿರುವ ಭಾಷೆಯಲ್ಲಿ ಮಾತಾಡಲು ಹೇಳಬೇಕು.

136. ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳ ಕಲಿಕಾ ಮಟ್ಟಕ್ಕಿಂತ ಹಿಂದೆ ಬಿದ್ದಾಗ ಅಂತಹ ವಿದ್ಯಾರ್ಥಿಗಳಿಗೆಂದು ಕೊಡುವ ಬೋಧಕ ವಿಧಾನದ ಹೆಸರು

(1) ಸಾರಾಂಶ ಬೋಧನೆ.

(2) ಮರು ಬೋಧನೆ.

(3) ಪರಿಹಾರಾತ್ಮಕ ಬೋಧನೆ ಅಥವಾ ರೆಮಿಡಿಯೇಶನ್ ಟೀಚಿಂಗ್.

(4) ಪರಿಷ್ಕರಣ ಬೋಧನೆ.

137. ಸಮ್ಮಿಶ್ರ ಸಾಮರ್ಥ್ಯದ ವಿದ್ಯಾರ್ಥಿಗಳಿಗಿರುವಂತಹ ತರಗತಿಗೆ ಅಗತ್ಯವಿರುವ ಪಠ್ಯಕ್ರಮ

(1) ಅವರದೇ ತರಹದ ಸಹ ವಿದ್ಯಾರ್ಥಿಗಳಿಗೆ ಜೊತೆಮಾಡಿ ಕೊಡುವುದು.

(2) ವಿಭಿನ್ನ ಮಟ್ಟದ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳೊಂದಿಗೆ ಪರಸ್ಪರ ವಿಚಾರ ವಿನಿಮಯಕ್ಕೆ ಒತ್ತುಕೊಟ್ಟು ಪ್ರೋತ್ಸಾಹಿಸುವುದು.

(3) ಗಣಿತ ಮತ್ತು ಭಾಷೆಗೆ ಹೆಚ್ಚು ಮಹತ್ವ ಕೊಡುವುದು.

(4) ಕ್ರೀಡೆ ಮತ್ತು ಭಾಷೆಗೆ ಹೆಚ್ಚು ಒತ್ತು ಕೊಡುವುದು.

**138.** ಇಲ್ಲಿರುವ ತಪ್ಪು ಪರಿಕಲ್ಪನೆಯನ್ನು ಗುರುತಿಸಿ: ಇಂಗ್ಲೀಷ್ ಕಲಿಯಲೆಂದು ನಿರ್ಮಿತವಾದ ಪಠ್ಯ ಪುಸ್ತಕಗಳು

(1) ಬೋಧಕರಿಗೆ ಭಾಷಾ ಬೋಧನೆಯ ವಿಧಾನಗಳನ್ನು ಮತ್ತು ಕ್ರಮಗಳನ್ನು ಮನದಟ್ಟು ಮಾಡಿಕೊಡುವಂತಿರಬೇಕು.

(2) ಕಲಿಯಬೇಕಾದ ವಿಷಯಗಳ ಸಮತೋಲನಾಯುಕ್ತ ಮಾಹಿತಿಗಳನ್ನು ನೀಡಬೇಕು.

(3) ಭಾಷಾ ಕಲಿಕೆಯ ಅನುಭವದ ಆಧಾರದ ಮೇಲೆ ಕ್ರಮಗೊಳಿಸಿದ ಪಠ್ಯಗಳಾಗಿರಬೇಕು.

(4) ಬೋಧಕರ ಅನುಕೂಲಕ್ಕೆ ವಿವರವಾದ ಪಠ್ಯ ಯೋಜನೆಯಾಗಿರಬೇಕು.

**139.** ಭಾಷಾ ಕಲಿಕೆಯಲ್ಲಿ ಕೆಲ ವಿಧವಾದ ದೋಷಗಳು ಅದರಲ್ಲೂ ವ್ಯಾಕರಣ ದೋಷಗಳು ಸಹಜವಾಗಿ ಬರುತ್ತವೆ. ಆಗ ಬೋಧಕರು

(1) ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಅವರು ಓದುತ್ತಿರುವುದನ್ನು/ಮಾತಾಡುತ್ತಿರುವುದನ್ನು ಮಧ್ಯದಲ್ಲಿ ನಿಲ್ಲಿಸಿ ಅವರ ತಪ್ಪನ್ನು ತಿದ್ದಬೇಕು.

(2) ವಿದ್ಯಾರ್ಥಿಗಳು ಓದುತ್ತಿರುವುದನ್ನು/ ಮಾತಾಡುತ್ತಿರುವುದನ್ನು ಪೂರ್ತಿಗೊಳಿಸಿದ ಮೇಲೆ ಆದ ದೋಷವನ್ನು ಗಮನಕ್ಕೆ ತಂದು ಸರಿಯಾದ ರೂಪವನ್ನು ತಿಳಿಸಿ ತಿದ್ದಬೇಕು.

(3) ತಪ್ಪು ಮಾಡುವುದು ಸಹಜವೆಂದು ಹಾಗೆಯೇ ಬಿಡಬೇಕು.

(4) ಅಂತಹ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರತ್ಯೇಕಿಸಿ ಅವರಿಗೆ ಪ್ರತ್ಯೇಕ ಪಾಠ ಹೇಳಬೇಕು.

**140.** ಮಾತೃಭಾಷೆಯಲ್ಲದ ಅನ್ಯ ಭಾಷೆಯನ್ನು ಬೋಧಿಸುವಾಗ ಬೋಧಕರು ಬಹುಬಾರಿ ತರಗತಿಯ ತುಂಬಾ ಆಸಕ್ತಿಯಿಲ್ಲದ ಇಚ್ಛೆಯಿಲ್ಲದ ವಿದ್ಯಾರ್ಥಿಗಳನ್ನು ಎದುರುಗೊಳ್ಳಬೇಕಾಗುತ್ತದೆ. ಆಗ

(1) ಶೈಕ್ಷಣಿಕ ಪರಿಣತರನ್ನು ಕರೆಸಿಕೊಳ್ಳಬೇಕು.

(2) ಆಸಕ್ತಿರಹಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪಾಠ ಹೇಳಬೇಕು.

(3) ವಿದ್ಯಾರ್ಥಿಗಳಿಗೆ ಅವರಿಗೆ ಕೊಟ್ಟ ಚಟುವಟಿಕೆಗಳನ್ನು ಪೂರೈಸಲು ಹೆಚ್ಚು ಸಮಯ ಕೊಡಬೇಕು.

(4) ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟಿಸುವಂತಹ ಕಲಿಕಾ ವಿಧಾನಗಳನ್ನು ಬಳಸಿ ಕಲಿಕೆಯನ್ನು ಪರಿಣಾಮಕಾರಿಯಾಗಿಸಬೇಕು.

**141.** ಭಾಷಾ ಕಲಿಕೆಯ ವಿದ್ಯಾರ್ಥಿಗಳು ಸಕ್ರಿಯ ಅಭ್ಯಾಸ ವಿಧಾನದಲ್ಲಿ ಕಲಿಯಬೇಕು. ಈ ಹೇಳಿಕೆಗೆ ಪೂರಕವಾದ ಚಟುವಟಿಕೆ ಯಾವುದು?

(1) ಕಲಿಯಬೇಕಾದ ಭಾಷೆಯ ಪಠ್ಯವನ್ನು ಅರ್ಥಮಾಡಿಸಲು ಮಾತೃಭಾಷೆಯ ಬಳಕೆಯನ್ನು ಪ್ರೋತ್ಸಾಹಿಸುವುದು.

(2) ಅಮೂರ್ತತೆಯಿಂದ ಮೂರ್ತತೆಯತ್ತ ಸಾಗುವುದು.

(3) ಬೋಧಕರ ಬರಹ ಮತ್ತು ಮಾತನಾಡುವ ವಿಧವನ್ನು ಅನುಕರಿಸುವುದು.

(4) ಅಭ್ಯಸಿಸಲು ಹೆಚ್ಚು ಅವಕಾಶವನ್ನು ನೀಡುವುದು ಮತ್ತು ಅದರ ಮೂಲಕ ಬಳಕೆಯ ಅಭಿರುಚಿಯನ್ನು ಬೆಳೆಸುವುದು.

ಸೂಚನೆ: ಕೆಳಗೆ ಕೊಟ್ಟಿರುವ ಗದ್ಯವನ್ನು ಓದಿ ಕೇಳಿರುವ ಪ್ರಶ್ನೆಗಳಿಗೆ **(142 ರಿಂದ 150)** ಸೂಕ್ತವಾದ ಆಯ್ಕೆಯನ್ನು ಆರಿಸಿ ಉತ್ತರಿಸಿ:

ಮಹಾತ್ಮ ಗಾಂಧೀಜಿ ಅವರ ತತ್ವ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ ಭಾರತ ಸೇವಾದಲ ರೂಪುಗೊಂಡಿತು. ತರುಣರಲ್ಲಿ ರಾಷ್ಟ್ರೀಯ ಜಾಗೃತಿಗೆ ಅವಶ್ಯಕವಾದ ದೇಶಭಕ್ತಿ, ದೃಢನಿರ್ಧಾರ, ಕಷ್ಟಸಹಿಷ್ಣುತೆ, ಸೇವಾಮನೋಭಾವ, ಸಂಯಮ, ಆತ್ಮವಿಶ್ವಾಸ, ತ್ಯಾಗ, ದೈಹೀಕ ಬಲಸಂವರ್ಧನೆಯ ಮನೋಭಾವವನ್ನು ಮೂಡಿಸುವುದೇ ಸೇವಾದಲದ ಮುಖ್ಯ ಉದ್ದೇಶವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಸೇವಾದಲದಲ್ಲಿ ಶಿಸ್ತೇ ಸರ್ವಸ್ವ ಜವಾಹರಲಾಲ್ ನೆಹರು ಈ ಮಹಾನ್ ಸಂಸ್ಥೆಯ ಪ್ರಾರಂಭಿಕ ಅಧ್ಯಕ್ಷರು, ಕ್ರಿಯಾಶೀಲ ಸಮಾಜದ ಕನಸುಗಾರ ನಾ.ಸು. ಹರ್ಡಿಕರ್ ಅದರ ಕಾರ್ಯದರ್ಶಿ.

ಸೇವಾದಲ ಸೇರಬಯಸುವ ಯುವ ಪೀಳಿಗೆಗೆ ತರಬೇತಿ ನೀಡಲು ಬಾಗಲಕೋಟೆಯಲ್ಲಿ ತರಬೇತಿ ಕೇಂದ್ರವನ್ನು ತೆರೆದರು. ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವುದು ಮಾತ್ರವಲ್ಲದೆ ನೆರೆಹಾವಳಿ, ರೋಗರುಜಿನಗಳ ಸಂಕಷ್ಟದಲ್ಲಿರುವವರ ಸಹಾಯಕ್ಕೂ ಸೇವಾದಲ ಸಿದ್ಧವಾಗಬೇಕೆಂದರು. ಇದು ದೇಶದ ಅಗತ್ಯತೆಗೆ ಮಿಡಿಯುವ ಸ್ವಯಂಸೇವಕದಲವಾಗಬೇಕೆಂದು ನಿರ್ಧರಿಸಿ 'ಸೇವಾದಲ' ಎಂದು ಹೆಸರಿಸಿದರು. ಸಮಾಜ ಸೇವೆಯೇ ಸೇವಾದಲದ ಪರಮ ಗುರಿ.

ಮಹಾತ್ಮಾ ಗಾಂಧೀಜಿ ಅವರು 1924ರ ಬೆಳಗಾವಿಯ ಐತಿಹಾಸಿಕ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು. ಲಕ್ಷಾಂತರ ಜನ ನೆರೆದಿದ್ದರು. ಆ ಸಂದರ್ಭದಲ್ಲಿ ಸೇವಾದಲ ಮಾಡಿದ ಸೇವೆ ಗಣನೀಯವಾದುದು. ಸ್ವಯಂಸೇವಕರ ವರ್ತನೆ, ಶಿಸ್ತು, ಸಂಯಮ, ಸೇವಾವೃತ್ತಿ ಜನಸಾಮಾನ್ಯರ ಹಾಗೂ ಗಾಂಧೀಜಿಯವರ ಮೆಚ್ಚುಗೆಗೆ ಪಾತ್ರವಾಯಿತು.

ಸೇವಾದಲ ಜನಸಾಮಾನ್ಯರ ಪ್ರತ್ಯೇಕ ಸಂಸ್ಥೆಯಾಯಿತು. ಅದರ ಧ್ಯೇಯೋದ್ದೇಶಗಳನ್ನು ವಿವರಿಸುವ ಮತ್ತು ಸಂಘಟನೆಯನ್ನು ಬಲಪಡಿಸುವ ಸಲುವಾಗಿ 'ವಾಲೆಂಟರ್' ಪತ್ರಿಕೆಯನ್ನು ಹರ್ಡಿಕರ್ ಪ್ರಾರಂಭಿಸಿದರು. 1950ರಲ್ಲಿ ಹಿಂದೂಸ್ಥಾನೀ ಸೇವಾದಲ 'ಭಾರತ ಸೇವಾದಲ' ಎಂದು ಪುನರ್ ನಾಮಕರಣದೊಂದಿಗೆ ಪ್ರಬಲ ಸಂಸ್ಥೆಯಾಗಿ ದೇಶದಲ್ಲೆಲ್ಲಾ ಪಸರಿಸಿತು. ಲಕ್ಷಾಂತರ ಯುವಕರು ಶಿಸ್ತಿನ ಸಿಪಾಯಿಗಳಾಗಿ ತರಬೇತಿ ಪಡೆದರು.

ಸೇವಾದಲ ನೇರವಾಗಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿತು. ಪರದೇಶಿ ವಸ್ತುಗಳ ಬಹಿಷ್ಕಾರ, ಕರನಿರಾಕರಣೆ, ಸ್ವದೇಶಿ ಆಂದೋಲನ, ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳವಳಿಗಳಲ್ಲಿ ಸೇವಾದಲ ಪಡೆ ಭಾಗವಹಿಸಿತು. ಲಕ್ಷಾಂತರ ಯುವಕರು ಆಕರ್ಷಿತರಾದರಲ್ಲದೆ ಭಾರತ ಸೇವಾದಲ ಸೇರಿದರು. ದೇಶದ ದಾಸ್ಯವಿಮೋಚನೆಗಾಗಿ ಹೋರಾಟ ನಡೆಸಿದರು. ಸೇವಾದ್ದಲದ ಇತಿಹಾಸದಲ್ಲಿ ಇದು ಚಿರಸ್ಮರಣೀಯ. ಗಾಂಧೀತತ್ವಗಳಿಂದ ವಿಚಲಿತವಾಗದೆ 'ಅಹಿಂಸಾ ಪರಮೋಧರ್ಮ'ವನ್ನು ಪಾಲಿಸಿತು. ಕಷ್ಟ ನಿಷ್ಠುರಗಳನ್ನು ಸಹಿಸಿತು. ಧ್ಯೇಯ್ಯ-ನಿಷ್ಠೆಗಳನ್ನು ಮೆರೆಯಿಸಿತು.

ಸೇವಾದಲದ ಜನಪ್ರಿಯತೆ ಹೆಚ್ಚಿದಂತೆಲ್ಲ ಬ್ರಿಟಿಷ್ ಸರ್ಕಾರ ಭಯಗೊಂಡಿತು. ಸೇವಾದಲ ಸಂಸ್ಥೆಯನ್ನು ಬಹಿಷ್ಕರಿಸಿತು. ದೇಶದ್ರೋಹದ ಅಪಾದನೆ ಮೇಲೆ ಹರ್ಡಿಕರ್ ಅವರನ್ನು ಬಂಧಿಸಿತು. ಹೀಗೆ ಭಾರತ ಸೇವಾದಲದ ಚರಿತ್ರೆ ರೋಚಕವಾಗಿದೆ.

**142.** ಸೇವಾದಲ ಸಂಘಟನೆಯನ್ನು ಬಲಪಡಿಸಲು ಹರ್ಡಿಕರ್ ಏನನ್ನು ಪ್ರಾರಂಭಿಸಿದರು?

(1) ಸತ್ಯಾಗ್ರಹ.

(2) ಆಂದೋಲನ.

(3) ಕಾರ್ಯಕ್ರಮ.

(4) ಪತ್ರಿಕೆ.

143. ಸೇವಾದಲದ ಸರ್ವಸ್ವ ಯಾವುದು?

(1) ನಿಷ್ಠೆ.

(2) ಶಿಸ್ತು.

(3) ಸಂಯಮ.

(4) ಧ್ಯೇಯ.

144. ಭಾರತ ಸೇವಾದಲ ಯಾರ ತತ್ವ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ ರೂಪುಗೊಂಡಿತು?

(1) ಮಹಾತ್ಮ ಗಾಂಧೀಜಿ.

(2) ಉಗ್ರವಾದಿ.

(3) ಕಾಂಗ್ರೆಸ್.

(4) ಸಮಾಜವಾದಿ.

145. ಸೇವಾದಲವನ್ನು ಬಲಪಡಿಸಲು ಹರ್ಡಿಕರ್ ಆರಂಭಿಸಿದ ಪತ್ರಿಕೆಯ ಹೆಸರು

(1) ಸೇವಾದಲ.

(2) ವಾಲೆಂಟರ್.

(3) ಚಾಲೆಂಜರ್.

(4) ಹಿಂದೂಸ್ಥಾನಿ.

146. ಸೇವಾದಲದ ಪರಮ ಗುರಿ

(1) ಸಮಾಜಸೇವೆ.

(2) ಆಂಗ್ಲರ ವಿರುದ್ಧ ಹೋರಾಟ.

(3) ಚಳುವಳಿ.

(4) ಪತ್ರಿಕೆ ಪ್ರಕಟಣೆ.

147. ಹಿಂದೂಸ್ಥಾನಿ ಸೇವಾದಲ 'ಭಾರತ ಸೇವಾದಲ' ಎಂದು ಹೆಸರು ಬದಲಾಯಿಸಿದ ವರ್ಷ

(1) 1947

(2) 1962

(3) 1950

(4) 1954

148. 1924ರಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನ ನಡೆದ ಸ್ಥಳ

(1) ರಾಯಚೂರು.

(2) ಬಿಜಾಪುರ.

(3) ಮೈಸೂರು.

(4) ಬೆಳಗಾವಿ.

149. ಸೇವಾದಲವನ್ನು ಬಹಿಷ್ಕರಿಸಿದ ಸರ್ಕಾರ

(1) ಇಂದಿರಾ ಕಾಂಗ್ರೆಸ್.

(2) ಯಾವುದೂ ಅಲ್ಲ.

(3) ನೆಹರೂ ಕಾಂಗ್ರೆಸ್.

(4) ಬ್ರಿಟಿಷ್.

150. ಸೇವಾದಲದ ಮೊದಲ ಅಧ್ಯಕ್ಷರು

(1) ಜವಾಹರ್‌ಲಾಲ್ ನೆಹರು.

(2) ಮಹಾತ್ಮ ಗಾಂಧಿ.

(3) ಹರ್ಡಿಕರ್.

(4) ವಲ್ಲಭಭಾಯಿ ಪಟೇಲ್.

SPACE FOR ROUGH WORK

*ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :*

1. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್‌ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.

2. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.

3. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.

4. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).

5. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.

6. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ಅನ್ನು ನಿರೀಕ್ಷಕರಿಗೆ ತೋರಿಸಬೇಕು.

7. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.

8. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

9. ಎಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.

10. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ-ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.

11. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.

12. ಪರೀಕ್ಷೆ ಮುಗಿದ ನಂತರ ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

**READ THE FOLLOWING INSTRUCTIONS CAREFULLY :**

1. Out of the four alternatives for each question, only one circle for the correct answer is to be darkened completely with Blue/Black Ballpoint Pen on **Side-2** of the OMR Answer Sheet. The answer once marked is not liable to be changed.
2. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
3. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
4. The candidates will write the correct Test Booklet Code and Number as given in the Test Booklet/Answer Sheet in the Attendance Sheet.
5. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the Examination Hall/Room.
6. Each candidate must show on demand his/her Admit Card to the Invigilator.
7. No candidate, without special permission of the Superintendent or Invigilator, should leave his/her seat.
8. The candidates should not leave the Examination Hall without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet, a second time will be deemed not to have handed over the Answer Sheet and dealt with as an unfair means case.
9. Use of Electronic/Manual Calculator is prohibited.
10. The candidates are governed by all Rules and Regulations of the Board with regard to their conduct in the Examination Hall. All cases of unfair means will be dealt with as per Rules and Regulations of the Board.
11. No part of the Test Booklet and Answer Sheet shall be detached under any circumstances.
12. **On completion of the test, the candidate must hand over the Answer Sheet to the Invigilator in the Room/Hall. *The candidates are allowed to take away this Test Booklet with them.***

**निम्नलिखित निर्देशों को ध्यान से पढ़ें :**

1. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर-पत्र के **पृष्ठ-2** पर केवल एक वृत्त को ही पूरी तरह नीले/काले बॉलपॉइंट पेन से भरें। एक बार उत्तर अंकित करने के बाद उसे बदला नहीं जा सकता है।
2. परीक्षार्थी सुनिश्चित करें कि इस उत्तर-पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
3. परीक्षा पुस्तिका एवं उत्तर-पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर-पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
4. परीक्षा पुस्तिका/उत्तर-पत्र में दिए गए परीक्षा पुस्तिका संकेत व संख्या को परीक्षार्थी सही तरीके से हाजिरी-पत्र में लिखें।
5. परीक्षार्थी द्वारा परीक्षा हॉल/कक्ष में प्रवेश-कार्ड के सिवाय किसी प्रकार की पाठ्य-सामग्री, मुद्रित या हस्तलिखित, कागज की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
6. पूछे जाने पर प्रत्येक परीक्षार्थी, निरीक्षक को अपना प्रवेश-कार्ड दिखाएँ।
7. अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
8. कार्यरत निरीक्षक को अपना उत्तर-पत्र दिए बिना एवं हाजिरी-पत्र पर दुबारा हस्ताक्षर किए बिना परीक्षार्थी परीक्षा हॉल नहीं छोड़ेंगे। यदि किसी परीक्षार्थी ने दूसरी बार हाजिरी-पत्र पर हस्ताक्षर नहीं किए, तो यह माना जाएगा कि उसने उत्तर-पत्र नहीं लौटाया है और यह अनुचित साधन का मामला माना जाएगा।
9. इलेक्ट्रॉनिक/हस्तचालित परिकलक का उपयोग वर्जित है।
10. परीक्षा हॉल में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं। अनुचित साधनों के सभी मामलों का फैसला बोर्ड के नियमों एवं विनियमों के अनुसार होगा।
11. किसी हालत में परीक्षा पुस्तिका और उत्तर-पत्र का कोई भाग अलग न करें।
12. **परीक्षा सम्पन्न होने पर, परीक्षार्थी कक्ष/हॉल छोड़ने से पूर्व उत्तर-पत्र निरीक्षक को अवश्य सौंप दें। *परीक्षार्थी अपने साथ इस परीक्षा पुस्तिका को ले जा सकते हैं।***